ಓ.ಎಸ್. ನಂ. 69/2018 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 4.1.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಒಂದು ಕೈಬರಹ ಪಹಣಿಯ ದೃಢೀಕೃತ ನಕಲನ್ನು ನಿಪಿ24 ಎಂದು, ಸಾಗುವಳಿ ಮಂಜೂರಾತಿಗೆ ನೀಡಿರುವ ಅರ್ಜಿಯ ದೃಢೀಕೃತ ನಕಲನ್ನು ನಿಪಿ25 ಎಂದು, ಅಹವಾಲು ತಃಖ್ತೆಯ ದೃಢೀಕೃತ ನಕಲನ್ನು ನಿಪಿ26 ಎಂದು, ಒಂದು ನಕಾಶೆಯ ದೃಢೀಕೃತ ನಕಲನ್ನು ನಿಪಿ27 ಎಂದು, ದಿನಾಂಕ 28.5.1975 ರ ಮೆಮೋದ ದೃಢೀಕೃತ ನಕಲನ್ನು ನಿಪಿ28 ಎಂದು, ದಿನಾಂಕ 31.5.1975 ರ ಕಂದಾಯ ನಿರೀಕ್ಷಕರ ವರದಿಯ ದೃಢೀಕೃತ ನಕಲನ್ನು ನಿಪಿ29 ಎಂದು, ಎ.ಡಿ.ಎಲ್.ಆರ್. ಹುಣಸೂರು ಇವರು ಕಡತ ರವಾನಿಸಿರುವ ಪತ್ರದ ದೃಢೀಕೃತ ನಕಲನ್ನು ನಿಪಿ30 ಎಂದು, ಆಸ್ತಿಯು ದುರಸ್ತಿಯಾದ ನಂತರ ಕಡತವನ್ನು ರೆಕಾರ್ಡ ರೂಂಗೆ ಕಳುಹಿಸಿರುವ ಬಗ್ಗೆ ದಾಖಲೆಯ ದೃಢೀಕೃತ ನಕಲನ್ನು ನಿಪಿ31 ಎಂದು, ಸಿದ್ದಯ್ಯ ಎಂಬುವವರಿಗೆ ಸಂಬಂಧಿಸಿದ ಗ್ರಾಂಟ್ ಸರ್ಟಿಪಿಕೆಟಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ32 ಎಂದು, ಸಾಗುವಳಿ ಮಂಜೂರಾತಿ ಸಮಯದಲ್ಲಿ ಮಾಡಿರುವ ವರದಿಯ ದೃಢೀಕೃತ ನಕಲನ್ನು (ಒಟ್ಟು 7 ಪುಟ) ನಿಪಿ33 ಎಂದು, ರಿಗ್ರಾಂಟ್‌ಗೆ ಸಂಬಂಂಧಪಟ್ಟ ತಹಶೀಲ್ದಾರ್ ರವರ ವರದಿಯ ದೃಢೀಕೃತ ನಕಲನ್ನು ನಿಪಿ34 ಎಂದು, ಆಸ್ತಿ ದುರಸ್ತಿಯ ಬಗ್ಗೆ ಶುಲ್ಕ ಪಾವತಿ ಚಲನ್‌ನ ದೃಢೀಕೃತ ನಕಲನ್ನು ನಿಪಿ35 ಎಂದು, ಕರಿಯಯ್ಯ,ಚಿಕ್ಕಸಿದ್ದಯ್ಯ, ಜವರಯ್ಯ ಮತ್ತು ಕುಂತಯ್ಯ ಎಂಬುವವರಿಗೆ ಸಂಬಂಧಪಟ್ಟ ಗ್ರಾಂಟ್ ಸರ್ಟಿಪಿಕೆಟಿನ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ತಕರಾರಿಗೆ ಒಳಪಟ್ಟು ನಿಪಿ36 ರಿಂದ ನಿಪಿ39 ಎಂದು, ಕಂದಾಯ ನಿರೀಕ್ಷಕರು ಮಾಡಿರುವ ಮಹಜರಿನ ದೃಢೀಕೃತ ನಕಲನ್ನು ನಿಪಿ40 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.